# ಎಲ್ಲರಿಗಾದ ಸಮಾಜವಾದಿ
# ಎಸ್. ವೆಂಕಟರಾಮ್

ಎಸ್.ಆರ್.ವಿಜಯಶಂಕರ

ಶ್ರೀ ಎಸ್.ವೆಂಕಟರಾಮ್ ತೀರಿಕೊಂಡಾಗ ನಮ್ಮ ಇಂದಿನ ರಾಜಕೀಯ ಸನ್ನಿವೇಶದಲ್ಲಿ ಏನಾದರೂ ಸಾಧಿಸುವ ಯೋಗ್ಯತೆ ಇದ್ದ ವಿರೋಧಪಕ್ಷದ ಸಮರ್ಥರೊಬ್ಬರನ್ನು ಕಳೆದುಕೊಂಡೆವು ಎಂದು ನನಗನಿಸಿತು. ಚಿಂತನಶೀಲ ಮನಸ್ಸಿನ ಅವರು ವಿಮರ್ಶಕನೂ ವಿದ್ವಾಂಸನೂ ಆದ ಸಹೃದಯಿ ಸಾಹಿತಿಯಾಗಿದ್ದರು. ವಿರಳವಾಗಿ ಸಿಗುವ ಪ್ರಾಮಾಣಿಕ ರಾಜಕಾರಣಿಯಾಗಿದ್ದರು. ಅವರ ಭಾಷಣಗಳ ವರದಿಗಳನ್ನೂ ಅವರು ಬರೆಯುತ್ತಿದ್ದ ಲೇಖನಗಳನ್ನೂ ತಪ್ಪದೆ ಓದುತ್ತಿದ್ದ ನನಗೆ ಈ ನೆಲದ ಸ್ವಭಾವವನ್ನು ಸಮಂಜಸವಾಗಿ ಅರಿತು, ಸಮಸ್ಯೆಗಳನ್ನು ಸಮರ್ಪಕವಾಗಿ ಬಿಡಿಸಬಲ್ಲ ಯೋಗ್ಯತೆ ಅವರಿಗೆ ಇತ್ತು ಎಂದು ತೋರುತ್ತಿತ್ತು. ಅವರನ್ನು ನಾನು ಕಂಡಿದ್ದು ಕಡಿಮೆ. ಒಡನಾಟದಲ್ಲಿ ಅವರ ವ್ಯಕ್ತಿತ್ವದ ಅನೇಕ ಪದರುಗಳನ್ನು ತಿಳಿದವನೂ ನಾನಲ್ಲ. ಆದರೆ ಒಮ್ಮೆ ಅವರ ಜೊತೆ ದೀರ್ಘ ಪ್ರಯಾಣ ಮಾಡಿದ ಅನುಭವ ಮಾತ್ರ ಸದಾ ನನಗೊಂದು ಮರೆಯಲಾರದ ನೆನಪು.

ಚಿಕ್ಕಮಗಳೂರು ಕ್ಷೇತ್ರದಿಂದ ಶ್ರೀಮತಿ ಇಂದಿರಾ ಗಾಂಧಿ ಲೋಕಸಭೆಗೆ ಸ್ಪರ್ಧಿಸಿದ್ದ ಸಮಯ ಅದು. ಜಾರ್ಜ್ ಫರ್ನಾಂಡಿಸ್ ಜೊತೆ ಏನನ್ನೋ ಮಾತಾಡುವುದಕ್ಕೆ ಬಂದಿದ್ದ ವೆಂಕಟರಾಮ್ ಪುನಃ ಬೆಂಗಳೂರಿಗೆ ಹಿಂದಿರುಗುವಾಗ ನಾನೂ ಅವರೂ ಒಂದೇ ಕಾರಿನಲ್ಲಿ ಪ್ರಯಾಣಿಸಿದ್ದೆವು. ನಾನಾಗ ಮೈಸೂರಿನಲ್ಲೊಬ್ಬ ಪುಟ್ಟ ವಿದ್ಯಾರ್ಥಿ ಮುಖಂಡ, ಅವರು ಜನತಾ ಪಕ್ಷದ ಕರ್ನಾಟಕ ರಾಜ್ಯ ಕಾರ್ಯದರ್ಶಿ, ಕಾರಿನಲ್ಲಿ ನಾವಲ್ಲದೆ ಡಾ.ಯು.ಆರ್.ಅನಂತಮೂರ್ತಿ ಮತ್ತು ಬಾಂಬೆ ಲೇಬರ್ ಯೂನಿಯನ್ನಿನ ಅಧ್ಯಕ್ಷ ಶ್ರೀ ಎಸ್.ಆರ್.ರಾವ್ ಕೂಡ ಇದ್ದರು.

ಈ ದೀರ್ಘ ಪ್ರಯಾಣದ ರಾತ್ರಿಯೆಲ್ಲ ನಾವು ಕಡ್ಡಾಯವಾಗಿ ಮಾತನಾಡುತ್ತಲೇ ಇರಬೇಕಾದಂಥ ಒಂದು ಪ್ರಸಂಗ ನಿರ್ಮಾಣವಾಗಿಬಿಟ್ಟಿತ್ತು. ತರೀಕೆರೆಯಲ್ಲಿ ನಾವು ಊಟಕ್ಕೆ ನಿಂತಾಗ ನಮ್ಮ ಕಾರಿನ ಡ್ರೈವರ್ ಬೇಕಾದ ಹಾಗೆ ವಿಸ್ಕಿ ಕುಡಿದುಬಿಟ್ಟಿದ್ದ. ಆಗ ರಾತ್ರಿ ಹತ್ತು ಗಂಟೆ ಕಳೆದಿತ್ತು. ವೆಂಕಟರಾಮ್ ಯಾವುದೋ ಮೀಟಿಂಗಿಗಾಗಿ ಮಾರನೇ ದಿನ ಬೆಳಿಗ್ಗೆ ಆರು ಗಂಟೆ ರೈಲಲ್ಲಿ ಬೆಂಗಳೂರಿನಿಂದ ಮದ್ರಾಸಿಗೆ ಹೋಗಲೇಬೇಕಾಗಿತ್ತು. ಹಗಲೆಲ್ಲಾ ಡ್ರೈವ್ ಮಾಡಿದ್ದ ನಮ್ಮ ಕಾರಿನ ಚಾಲಕ ತುಂಬಾ ದಣಿದಿದ್ದ. ದಣಿಕೆ ಕಡಿಮೆಯಾಗಲೆಂದು ವಿಸ್ಕಿ ಕುಡಿದ ಪರಿಣಾಮವಾಗಿ ತೂಕಡಿಸಲೂ ಪ್ರಾರಂಭಿಸಿದ.

ಶಿವಮೊಗ್ಗ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರು ಓಡುತ್ತಿದ್ದಾಗ ಡ್ರೈವರ್ ಕುಡಿದ ನೆನಪಾಗಿ ನಮಗೆ ಒಂದು ರೀತಿ ಪ್ರಾಣಭಯವಾದ ಹಾಗಾಯಿತು. ಕೇಳಿದರೆ ಚಾಲಕ ವಿಶ್ರಾಂತಿ ಬೇಕು ಅನ್ನುತ್ತಾನೆ. ವೆಂಕಟರಾಮ್‌ಗೆ ಹೋಗದೆ ಉಪಾಯವಿಲ್ಲ. ಆದ್ದರಿಂದ, ಕಾರಿನೊಳಗೆ ನಾವು ಮಾತಾಡುತ್ತಾ ಇದ್ದರೆ ಮೌನ ಇಲ್ಲದಾಗಿ ಜೀವಂತ ಶಬ್ದಗಳಿಂದ ಡ್ರೈವರಿಗೆ ತೂಕಡಿಕೆ ಬರಲಾರದು ಎಂದು ನಿಶ್ಚಯಿಸಿದೆವು. ಆಗಾಗ ಡ್ರೈವರನ್ನೂ ಮಾತಾಡಿಸುತ್ತಾ ನಮ್ಮೊಳಗೇ ನಾವು ಮಾತಿಗೆ ತೊಡಗಿದೆವು. ಮೊದಲೇ ನಾವೆಲ್ಲ ಪಟ್ಟಾಂಗ ಪ್ರವೀಣರು. ಅದರ ಮೇಲೆ ಡಾ. ಅನಂತಮೂರ್ತಿ ಮತ್ತು ವೆಂಕಟರಾಮ್ ಬಹಳ ಪ್ರೀತಿಯ ಸ್ನೇಹಿತರು. (ಅನಂತಮೂರ್ತಿ 'ಅವಸ್ಥೆ' ಎಂಬ ತಮ್ಮ ಕಾದಂಬರಿಯನ್ನು ವೆಂಕಟರಾಮರಿಗೆ ಅರ್ಪಿಸಿದ್ದಾರೆ.) ಎಂದ ಮೇಲೆ ಮಾತಿನ ಒಂದು ತುದಿ ಇನ್ನೊಂದಕ್ಕೆ ಸೇರುತ್ತಾ ಬೆಂಗಳೂರು ಬಂದದ್ದೇ ಗೊತ್ತಾಗಲಿಲ್ಲ. ನಡುವೆ ಎಲ್ಲೋ ತುಮಕೂರಿನ ಹಿಂದೆಯೊ ಮುಂದೆಯೊ ಒಮ್ಮೆ ಚಹಾ ಕುಡಿದು, ಗೂಡಂಗಡಿಯವನನ್ನು ಎಬ್ಬಿಸಿ ಎರಡು ಪ್ಯಾಕೆಟ್ ಸಿಗರೇಟ್ ಕೊಂಡದ್ದು ಮಾತ್ರ ನೆನಪು.

ಡಾ.ಅನಂತಮೂರ್ತಿಯವರ 'ಭಾರತೀಪುರ'ದ ಮೇಲೆ ಶ್ರೀ ಎಸ್.ವೆಂಕಟರಾಮ್ 'ಸಾಕ್ಷಿ'ಯಲ್ಲಿ ಪ್ರಕಟಿಸಿದ್ದ ವಿಮರ್ಶಾ ಲೇಖನದ ಸುದ್ದಿ ತೆಗೆದಾಗ ನಮ್ಮ ಮಾತು ಭಾರತದ ಮನಃಸ್ಥಿತಿಯ ಬಗ್ಗೆ ತಿರುಗಿತು. ಮಾತಿನ ನಡುವೆ ವೆಂಕಟರಾಮ್, 'ಅಮೇರಿಕದಲ್ಲಿ ಮರ್ಲಿನ್ ಮನ್ರೋ ಆತ್ಮಹತ್ಯೆ ಮಾಡಿಕೊಂಡ ಮನಃಸ್ಥಿತಿಯೂ, ರಾಜಕುಮಾರಿಯಾಗಿದ್ದ ಮೀರಾ ಅರಮನೆ ತ್ಯಜಿಸಿ ಸಂತ ಮೀರಾಬಾಯಿಯಾದ ಮನಃಸ್ಥಿತಿಯೂ ಒಂದೇ' ಎಂದರು– ಈ ಬಗ್ಗೆ ಅವರೊಂದು ಪ್ರತ್ಯೇಕ ಲೇಖನವನ್ನೂ ಪ್ರಕಟಿಸಿದ್ದಾರೆ. ಆತ್ಮಹತ್ಯೆ ಹೇಗೆ ವಿವಿಧ ಕಾರಣಗಳಿಂದ ಸಾಧ್ಯವೋ ಹಾಗೆಯೇ ದೇವರ ಬಳಿಗೂ ನಮ್ಮ ಜನರು ಅನೇಕ ಕಾರಣಗಳಿಗಾಗಿ ಹೋಗುತ್ತಾರೆ. ಆದರೆ ಇವೆರಡೂ ಕ್ರಿಯೆಯನ್ನು ನಿಯಂತ್ರಿಸುವ ಮನಸ್ಸು 'ಪಲಾಯನ ವಾದ'ಕ್ಕೆ ಹತ್ತಿರವಾದ ಒಂದು ಸ್ಥಿತಿ ಎಂಬ ವಾದಸರಣಿ ಇದ್ದಂತೆ ಆಗ ನನಗೆ ತೋರಿತು.

ಅವರ ಮಾತಿನ ಹಿನ್ನೆಲೆಯಲ್ಲಿ ಅಗಾಧವಾದ ಓದಿನ ಹಾಗೂ ಪಾಂಡಿತ್ಯದ ಜ್ಞಾನವೂ ಇತ್ತು. ಆಲ್ಬರ್ಟ್ ಕಾಮೂನ 'ಮಿಥ್ ಆಫ್ ಸಿಸಿಫಸ್' ನೀತ್ಸೆ ಮತ್ತು ರಸೆಲ್‌ನ ವಾದಗಳು ಹೀಗೆ ಪ್ರಪಂಚದ ವಿವಿಧ ತತ್ವಜ್ಞಾನಿಗಳು ಬರೆದದ್ದು ವೆಂಕಟರಾಮ್ ಮಾತಾಡುತ್ತಿದ್ದ ಸಂದರ್ಭದಲ್ಲಿ ಎಳೆ ಎಳೆಯಾಗಿ ನೆನಪಾಗುತ್ತಿತ್ತು. ಆದರೆ ಅವನ್ನೆಲ್ಲ ಅಗತ್ಯ ಬಿದ್ದಾಗ ಮಾತ್ರ ಇಂಡಿಯಾದ ಮೂಲ ಚೇತನವನ್ನು ವೈಜ್ಞಾನಿಕವಾಗಿ ಅರ್ಥಮಾಡಿಕೊಳ್ಳುವುದಕ್ಕೆ ಬೇಕಾದಷ್ಟೆ ಉಪಯೋಗಿಸಿಕೊಂಡಂತೆ ತೋರಿತು. ನಮ್ಮ ನೆಲದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ದಿವಂಗತ ಡಾ.ರಾಮ ಮನೋಹರ ಲೋಹಿಯಾರ ನೇರ ಪ್ರಭಾವಕ್ಕೆ ಒಳಗಾದ ಚಿಂತಕನಂತೆ ಅವರು ನನಗೆ ಕಂಡರು.

ಕೇವಲ ನಾಲ್ಕನೇ ಕ್ಲಾಸಿಗೆ ತನ್ನ ಓದನ್ನು ಮುಗಿಸಿದ ವೆಂಕಟರಾಮ್ ಆಮೇಲೆ ಶಾಲೆಗೆ ಹೋಗಲಿಲ್ಲ. ಆದರೆ ಯಾವುದೇ ಒಬ್ಬ ಯುನಿವರ್ಸಿಟಿ ಪ್ರೊಫೆಸರನಿಗೂ ಕಡಿಮೆ ಇಲ್ಲದ ಜ್ಞಾನವನ್ನವರು ಸಂಪಾದಿಸಿದರು. ಕರ್ನಾಟಕದ ಸಮಾಜವಾದಿ ಮುಖಂಡರಲ್ಲೆಲ್ಲ ಅವರು ದೊಡ್ಡ

ತಾತ್ವಿಕರು (Theorist). ನಿಜವಾದ ಅರ್ಥದಲ್ಲಿ ಕರ್ನಾಟಕದ ಸಮಾಜವಾದಿ ಪಕ್ಷದಲ್ಲಿದ್ದು ಮೇಲೆ ಬಂದ ಅನೇಕರು ವೆಂಕಟರಾಮ್ ಅವರ ಶಿಷ್ಯರು. ವೆಂಕಟರಾಮ್ ಸಾಯುತ್ತಾ ಆಸ್ಪತ್ರೆಯಲ್ಲಿ ಮಲಗಿದ್ದಾಗ, ಇಡೀ ದಿನ ಎಂಬ ಹಾಗೆ ಆಸ್ಪತ್ರೆಯಲ್ಲಿದ್ದ ಕರ್ನಾಟಕದ ಕ್ಯಾಬಿನೆಟ್ ಸಚಿವರೊಬ್ಬರು "ನನ್ನ ನಿಜವಾದ ಗುರು ಇವರು ಸಾರ್, ನನಗೆ ರಾಜಕೀಯ ಹೇಳಿಕೊಟ್ಟವರು ಇವರು. ಇಂದಿರಾ ಗಾಂಧಿ ಅಲ್ಲ," ಎಂದು ಹೇಳಿ ಕಣ್ಣೀರು ಹಾಕಿ ಅತ್ತರೆಂದು ಆಸ್ಪತ್ರೆಯಲ್ಲಿದ್ದ ಒಬ್ಬರು ನನಗೆ ಹೇಳಿದರು.

ಡಾ.ಲೋಹಿಯಾ ಕಮ್ಯುನಿಸಮ್ಮಿನ ಪ್ರಭಾವಕ್ಕೊಳಗಾಗಿಯೂ, ಅದನ್ನು ಬಿಟ್ಟು ಅಧಿಕಾರದ ವಿಕೇಂದ್ರೀಕರಣ ಇರುವ ಸಮಾಜವಾದ ತರಲು ಹೊರಟವರು. ಗಾಂಧೀಜಿಯನ್ನು ಸರಿಯಾಗಿ ಅರ್ಥಮಾಡಿಕೊಂಡು ಅಲ್ಲಿಂದ ಮುಂದಕ್ಕೆ ಇಂಡಿಯಾದಲ್ಲಿ ಹೊರಟವರು ಲೋಹಿಯಾ ಮಾತ್ರ. ಕರ್ನಾಟಕದ ಲೋಹಿಯಾ ಎಂದೇ ಪ್ರಖ್ಯಾತರಾಗಿದ್ದ ಶಾಂತವೇರಿ ಗೋಪಾಲ ಗೌಡರ ಗರಡಿಯಲ್ಲಿ ಪಳಗಿದ್ದ ಎಸ್.ವೆಂಕಟರಾಮ್ ನಮ್ಮ ಸಮಸ್ಯೆಗಳನ್ನು ಎಷ್ಟು ಚೆನ್ನಾಗಿ ಅರ್ಥ ಮಾಡಿಕೊಳ್ಳಬಲ್ಲವರು ಎಂಬುದಕ್ಕೊಂದು ಪುಟ್ಟ ಉದಾಹರಣೆ ಹೇಳುತ್ತೇನೆ.

ಕಾರಿನಿಂದ ಇಳಿದು ನಾವು ಕಾಫಿ ಕುಡಿಯಲು ಹೋದದ್ದು ಒಬ್ಬ ಕಾಕನ ಅಂಗಡಿಗೆ. ರಾತ್ರಿ ಹನ್ನೆರಡು ಗಂಟೆ ಮೇಲೂ ಅವನು ಅಂಗಡಿ ಬಾಗಿಲು ತೆಗೆದಿದ್ದ. ಆ ಅಂಗಡಿ ರಾತ್ರಿಯಲ್ಲಿ ನ್ಯಾಷನಲ್ ಹೈವೇಯ ಲಾರಿ ಚಾಲಕರಿಗೆ ಚಹಾ ಕುಡಿಯಲು ಇರುವ ಸಣ್ಣ ಹೋಟೇಲು. ಹಗಲಲ್ಲಿ ಅದೇ ಕಾಕನ ಅಂಗಡಿ ಸೈಕಲ್ ರಿಪೇರಿ ಮಾಡುವ ಪುಟ್ಟ ಶಾಪ್. ವೆಂಕಟರಾಮ್ ಕರ್ನಾಟಕದ ಹಿಂದೂ–ಮುಸ್ಲಿಂ ಸಮಸ್ಯೆ ಬಗ್ಗೆ ಒಟ್ಟಾಗಿ ಒಂದು ಮಾತು ಹೇಳಿದರು.

"ನಮ್ಮ ಮುಸ್ಲಿಮರಲ್ಲಿ ಹೆಚ್ಚಿನವರು ಸ್ವತಂತ್ರ ಕಾರ್ಮಿಕರು. ಸಣ್ಣ ಸೈಕಲ್ ಶಾಪ್, ಚಹಾದ

ಕಾರ್ಮಿಕ ಸಂಘಟನೆಯ ಪರಿಧಿಯೊಳಗೂ ಸೇರುವುದಿಲ್ಲ. ಆದ್ದರಿಂದ ಹೊರಗಿನ ಅವಶ್ಯಕತೆಗಳಿಗಾಗಿ ಒಂದಾಗುವುದಕ್ಕೆ ಅವರಿಗೆ ತಮ್ಮ ಧರ್ಮದ ಸಂಘಟನೆಯ ಹೊರತಾಗಿ ಬೇರೆ ಯಾವ ದಾರಿಯೂ ಇಲ್ಲ. ಹೀಗಾಗಿ ಅವರನ್ನು ಧರ್ಮವಲ್ಲದ ಬೇರೊಂದು ಸಾಮಾಜಿಕ ಸಂಘಟನೆಯಲ್ಲಿ ಸೇರಿಸುವುದು ತೀರಾ ಅಗತ್ಯ. ಅದೊಂದು ಲೇಬರ್ ಯೂನಿಯನ್ನೇ ಇರಬಹುದು, ಇನ್ನಾವುದೇ ಇರಬಹುದು. ಆಗ ಧರ್ಮ ಅವರ ಕೇವಲ ಅಂತರಂಗ ಸಮಾಧಾನಕ್ಕೆ ಮಾತ್ರ ಬೇಕಾಗುತ್ತದೆ. ಅದೇ ಅವರಿಗೆ ಭದ್ರತೆಯನ್ನು ಕೊಡುವ ಸಾಧನವಾಗುವುದಿಲ್ಲ. ಇದರ ಪ್ರತ್ಯಕ್ಷ ದರ್ಶನಕ್ಕೆ ಬೇಕಾದರೆ ಮುಸ್ಲಿಮರೇ ಹೆಚ್ಚಿರುವ ಬೀಡಿ ಕಾರ್ಮಿಕರಲ್ಲಾದ ಬದಲಾವಣೆಯನ್ನು ಗಮನಿಸಬಹುದು", ಎಂದರು.

ಆ ದಿನ ಹುಣ್ಣಿಮೆ, ಚಂದ್ರನ ಮೇಲೆ ತೆಳ್ಳಗೆ ರೂಮಲ್ಲಿ ತುಂಬಿದ ಸಿಗರೇಟಿನ ಹೊಗೆಯ ಹಾಗೆ ಒಂದೆರಡು ಮೋಡಗಳು ಹರಿದಾಡಿದವು. ಆಕಾಶದ ವೈಭವದ ವಿನ್ಯಾಸವನ್ನು ತದೇಕ ಚಿತ್ತದಿಂದ ನೋಡುತ್ತಿದ್ದ ವೆಂಕಟರಾಮ್ ಕವಿ ಭಾಸನ ಒಂದು ಸಂಸ್ಕೃತ ವಾಕ್ಯವನ್ನು ಉದ್ಧರಿಸಿ. ಸುಂದರಿಯೊಬ್ಬಳ ಮುಖದ ಮೇಲೆ ಹಾರಾಡಿದ ಮುಂಗುರುಳಿನ ಹೋಲಿಕೆ ಕೊಟ್ಟರು. "ಇವೆಲ್ಲಾ ಕ್ಲೀಷೆ ಅನ್ನುತ್ತಲ್ವಾ" ಎಂದು ಅವರೇ ಹೇಳಿಕೊಂಡು, "ಆದರೆ ಒಮ್ಮೊಮ್ಮೆ ಅದು ಏನು ಮಾಡಿದರೂ ಹಾಗೇ ಕಾಣ್ಸೋದು" ಎಂದರು. ಅಂಥ ಆಕಾಶದ ಸುಂದರ ರೂಪ ಹೊಸದೇನನ್ನೂ ಹೇಳಲು ಹೊಳೆಯಿಸುವುದೇ ಇಲ್ವಲ್ಲಾ ಎಂಬ ನೋವು ಆ ಮಾತಿನಲ್ಲಿದ್ದಂತೆ ತೋರಿತು.

ಆ ದಿನ ನಾವು ದಾಸ್ತೋಯ್‌ವಸ್ಕಿಯ ಕಾದಂಬರಿಗಳಿಂದ ಹೆಗ್ಗೋಡಿನ ರಂಗ ಮಂದಿರದವರೆಗೆ ಸಾವಿರ ಮಾತಾಡಿರಬಹುದು. ಸಾಹಿತಿಗಳಿಗೆ ಹೆಚ್ಚಾಗಿ ಲಭ್ಯವಾಗುವ ಸೂಕ್ಷ್ಮ ಸಂವೇದನಾಶೀಲ ಮನಸ್ಸು ಅವರಿಗೆ ದತ್ತವಾಗಿತ್ತು. ಆಗ ನನಗನಿಸಿದ್ದು ಇಂಥವರ ಕೈಗೆ ಈ